ಮಾರ್ಗದಲ್ಲಿ ಬಸ್ಸುಗಳು ಸಂಚಾರ ಮಾಡುತ್ತಿತ್ತು, ಆ ಮಾರ್ಗಗಳ ಮಾಹಿತಿಗಳನ್ನು ನಮ್ಮ ಅಧಿಕಾರಿಗಳು ನೀಡುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಒಂದು ಮಾರ್ಗದಲ್ಲಿ ಬಸ್ಸುಗಳು ಓಡಾಡುತ್ತಿತ್ತು, ಇವತ್ತು ಬಹಳಷ್ಟು ರಸ್ತೆಗಳು ಹಾಳಾಗಿದ್ದು ಅವುಗಳ ಮಾಹಿತಿಯನ್ನು ನಮಗೆ ಕೊಡುತ್ತಾರೆ. ಆ ಉದ್ದೇಶದಿಂದ ಅಲ್ಲಿ ಬಸ್ ಸಂಚಾರವನ್ನು ನಿಲ್ಲಿಸುವುದೇವೆಂದು ಮಾಹಿತಿಯನ್ನು ಕೊಡುತ್ತಾರೆ. ಆ ಬಗ್ಗೆ ನಾನು ಲೋಕೋಪಯೋಗಿ ಮಂತ್ರಿಯವರಿಗೆ ಪತ್ರ ಬರೆದರೆ ರಸ್ತೆ ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಆ ಕ್ಷೇತ್ರದ ಶಾಸಕರಾಗಿ ಒತ್ತಾಯ ಮಾಡಿದಾಗ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿರಬಹುದು....

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಏನು ಉತ್ತರವನ್ನು ಕೊಡುತ್ತಿದ್ದಾರೆಂದು ಗೊತ್ತಾಗುವುದಿಲ್ಲ. ಇವರು ನಿನ್ನೆಯೂ ಸಹ ಇದೇ ರೀತಿಯಲ್ಲಿ ಉತ್ತರವನ್ನು ಕೊಟ್ಟರು. ಅವರ ಸರ್ಕಾರದಲ್ಲಿ, ಸಾರಿಗೆ ಮತ್ತು ಲೋಕೋಪಯೋಗಿ ಇಲಾಖೆಗಳು ಇರುವಂಥಾದ್ದು, ಇವು ಬೇರೆ ಬೇರೆಯಾಗಿ ಇವೆಯೇನು?

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗಜ್ಞಾನೇಂದ್ರರವರು ಹಾಗೂ ಮಾನ್ಯ ಸದಾನಂದ ಗೌಡರು ಒಂದೇ ಆಗುವುದಕ್ಕೆ ಸಾಧ್ಯವೇ? ಅವರ ಕ್ಷೇತ್ರ ಬೇರೆ, ಇವರ ಕ್ಷೇತ್ರ ಬೇರೆ, ಈಗ ಮಾನ್ಯ ಸದಾನಂದಗೌಡರು ತೀರ್ಥಹಳ್ಳಿ ಕ್ಷೇತ್ರದ ಕೆಲಸವನ್ನು ಹೇಳಲಿ ಆ ರೀತಿ ಹೇಳುವುದಕ್ಕೆ ಸಾಧ್ಯವಿದೆಯಾ? ಅದೇ ರೀತಿಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಾನ್ಯ ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದನ್ನು ಹೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅದನ್ನೇ ನಿಮ್ಮ ಸ್ನೇಹಿತರಿಗೆ ಹೇಳಿ, ನಾನು ನನ್ನ ಇಲಾಖೆಗೆ ಸಂಬಂಧಪಟ್ಟಿದ್ದನ್ನು ನಾನು ಹೇಳಬಹುದು. ನಾನು ಸಚಿವ ಸಂಪುಟದ ಸದಸ್ಯನಾಗಿ ಸಾರಿಗೆ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇನೆ. ತಾವು ಪ್ರತ್ಯೇಕವಾಗಿ ರಸ್ತೆಗಳ ಬಗ್ಗೆ ಮಾಹಿತಿಯನ್ನು ಕೊಡಿ, ನಾನು ಲೋಕೋಪಯೋಗಿ ಇಲಾಖೆಯವರಿಗೆ ಬರವಣಿಗೆಯ ಮೂಲಕ ಕಳುಹಿಸಿಕೊಡುತ್ತೇನೆ.

ಕ್ಷೇತ್ರವಾರು ಆಶ್ರಯ ಯೋಜನೆಯ ಅನುಷ್ಠಾನ.

488(4296) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಧಾನ ಸಭಾ ಕ್ಷೇತ್ರವಾರು ಆಶ್ರಯ ಸಮಿತಿ ರಚನೆಯಿಂದಾಗಿ ತಾಲ್ಲೂಕು ಮಟ್ಟದಲ್ಲಿ, ಆಶ್ರಯ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ಗೊಂದಲ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಆಶ್ರಯ ಯೋಜನೆಯಡಿಯಲ್ಲಿ ಹಲವಾರು ಗ್ರಾಮಗಳಲ್ಲಿ ನಿವೇಶನ ರಹಿತರಿಗೆ ನಿವೇಶನ ವಿತರಣೆ ಸೂಕ್ತ ಸರ್ಕಾರಿ ಸ್ಥಳ ಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಉ) ಆಶ್ರಯ ಮನೆಗಳಿಗೆ ಪ್ರಸ್ತುತ ಸರ್ಕಾರವು ಕೊಡ ಮಾಡುವ ಮೊತ್ತದಲ್ಲಿ ಸಾಕಷ್ಟು ಉತ್ತಮ ಗುಣಮಟ್ಟದ ಮನೆಗಳನ್ನು ನಿರ್ಮಿಸಲು ಅಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಇದನ್ನು ಹೆಚ್ಚಿಸುವ ಇರಾದೆ ಸರ್ಕಾರಕ್ಕಿದೆಯೇ.

ಊ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಈ) ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮ ಮುನಿಸಿಪಲ್ ಪ್ರದೇಶಗಳಲ್ಲಿ ಖಾಸಗಿ ಜಮೀನನ್ನು ನೇರವಾಗಿ ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಯವರನ್ನು ವಿಧಾನಸಭಾ ಕ್ಷೇತ್ರವಾರು ಆಶ್ರಯ ಸಮಿತಿಯ ರಚನೆಯಿಂದಾಗಿ ತಾಲ್ಲೂಕು ಮಟ್ಟದಲ್ಲಿ, ಆಶ್ರಯ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ಗೊಂದಲ ಸರ್ಕಾರದ ಗಮನಕ್ಕೆ ಬಂದಿದೆಯಾ? ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಇಲ್ಲವೆಂದು ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಲು ಇಚ್ಛಿಸುತ್ತೇನೆ. ನಾನು ಇದಕ್ಕೆ ಉದಾಹರಣೆಗಳನ್ನು ಕೊಡುತ್ತೇನೆ. ಪುತ್ತೂರು ತಾಲ್ಲೂಕಿನ

21 ಗ್ರಾಮಗಳು ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಸೇರುತ್ತವೆ. ಬಂಟ್ವಾಳ ತಾಲ್ಲೂಕಿನ 11 ಗ್ರಾಮಗಳು ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತವೆ. ತಾವು ಆಶ್ರಯ ಸಮಿತಿಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ, ತಾಲ್ಲೂಕಿನಲ್ಲಿರುವಂತಹ ವ್ಯಕ್ತಿಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಕೂಡ ಆ ವಿಧಾನಸಭಾ ಕ್ಷೇತ್ರದಲ್ಲಿರುವವರನ್ನೇ ಮಾಡಿದ್ದೀರಿ. ಈ ವಿಚಾರವಾಗಿ ಒಂದು ಉದಾಹರಣೆಯನ್ನು ಕೊಡುವುದಾದರೆ ಸುಳ್ಯ ಆಶ್ರಯ ಸಮಿತಿಗೆ 21 ಹಳ್ಳಿಗಳು ಸೇರುವಂಥಾದ್ದಕ್ಕೆ ಆ ಭಾಗದ ಯಾವುದೇ ಸದಸ್ಯರು ಅದರಲ್ಲಿ ಇಲ್ಲ. ಅವರಲ್ಲಿ ಯಾವುದೇ ಮಾಹಿತಿಯೂ ಇಲ್ಲ. ಇದರ ಆಯ್ಕೆಯಾಗುವಂಥಾದ್ದು ಪುತ್ತೂರಿನ ತಾಲ್ಲೂಕು ಕಚೇರಿಯ ಅಧಿಕಾರಿಗಳು ಆಯ್ಕೆ ಮಾಡುವಂಥಾದ್ದು, ಇಂತಹ ಸಂದರ್ಭದಲ್ಲಿ ವಿಧಾನಸಭಾ ಕ್ಷೇತ್ರವಾರು ಮಾಡುವಾಗ ಆ ಭಾಗಕ್ಕೆ ಬೇರೆ ಯಾವುದಾದರೂ ತಾಲ್ಲೂಕುಗಳು, ಇತರ ಭಾಗಗಳು ಸೇರಿದಂಥ ಜನ ಪ್ರತಿನಿಧಿಗಳನ್ನು ಸೇರಿಸದೇ ಇರುವ ಕಾರಣ ತೊಂದರೆಯಾಗಿದೆ ಎಂದು ನಾನು ವೈಯಕ್ತಿಕವಾಗಿ ತಮಗೆ ಹೇಳುತ್ತಿದ್ದೇನೆ. ಈ ವಿಚಾರವಾಗಿ ಆ ಭಾಗದ ಬಗ್ಗೆ ಸರ್ಕಾರ ಏನು ನಿಲುವನ್ನು ತೆಗೆದುಕೊಳ್ಳುತ್ತದೆ. ಆ ಭಾಗದಿಂದ ಆಶ್ರಯ ಸಮಿತಿಗೆ ಸದಸ್ಯರನ್ನು ತೆಗೆದುಕೊಳ್ಳುವ ವಿಚಾರವಾಗಿ ಸರ್ಕಾರಕ್ಕೆ ಏನಾದರೂ ಆಲೋಚನೆ ಇದೆಯೆ? ಇಲ್ಲಿ ಎಲ್ಲರಿಗೂ ತೊಂದರೆಯಾಗಿದೆ. ಅಲ್ಲಿ ಅಧಿಕಾರಿಗಳ ಹೇಳಿಕೆಯ ಮುಖಾಂತರವೇ ಮಾಡಬೇಕಾಗಿದೆ, ಇದು ನನ್ನ ಕ್ಷೇತ್ರವಲ್ಲ, ನಾನು ಅದನ್ನು ಮಾಡುವುದಕ್ಕಾಗುವುದಿಲ್ಲ. ಇದನ್ನು ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿಯವುದಿಲ್ಲ. ಈಗ ಬಂಟ್ವಾಳ ತಾಲ್ಲೂಕಿನಿಂದ ನನ್ನ ಕ್ಷೇತ್ರಕ್ಕೆ ಸೇರಿದಂತಹ 11 ಗ್ರಾಮಗಳಲ್ಲಿ ಯಾವುದೇ ಪ್ರತಿನಿಧಿ ನನ್ನ ಕ್ಷೇತ್ರದ ಸಮಿತಿಯಲ್ಲಿಯವುದಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಖಿಮಯಲ್ ಇಷ್ಟಾ :— ಮಾನ್ಯ ಅಧ್ಯಕ್ಷರೆ, ನಾವು ಈ ಸಲ ಕ್ಷೇತ್ರವಾರು ಆಶ್ರಯ ಸಮಿತಿಗಳನ್ನು ಮಾಡಿದ್ದೇವೆ. ಇದಕ್ಕೆ ಬಹಳಷ್ಟು ಶಾಸಕರು ತಾಲ್ಲೂಕುವಾರು ಮಾಡಿದರೆ ಕಷ್ಟವಾಗುತ್ತದೆಂದು ಡಿಮ್ಯಾಂಡ್ ಮಾಡಿದ್ದಾರೆ, ಇದನ್ನು ಕ್ಷೇತ್ರವಾರು ಮಾಡಿದರೆ ಟಾರ್ಗೆಟ್ ಕಂಪ್ಲೀಟ್ ಉಪಯೋಗಿಸಬೇಕು. Constituencywise target can be completed. ಈ ವಿಚಾರವಾಗಿ ನಾನು ಎಲ್ಲಾ ಶಾಸಕರೊಂದಿಗೆ ನನ್ನ ಕಚೇರಿಯಲ್ಲಿ ಮಾತನಾಡಿದ್ದೇನೆ. ಇದರಲ್ಲಿ, ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ, ಅದನ್ನು ನಾನು ಸರಿಪಡಿಸುತ್ತೇನೆ. In the Government we have taken a decision that target will be fixed constituency wise and committees have been constituted constituency wise.

ಶ್ರೀ ಡಿ.ವಿ. ಸದಾನಂದ ಗೌಡ :— ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವೇನೆಂದರೆ ಆಶ್ರಯ ಯೋಜನೆಯಡಿಯಲ್ಲಿ ಹಲವಾರು ಗ್ರಾಮಗಳಲ್ಲಿ ನಿವೇಶನ ರಹಿತರಿಗೆ ನಿವೇಶನ ವಿತರಣೆಗೆ ಸೂಕ್ತ ಸರ್ಕಾರಿ ಸ್ಥಳಗಳು ಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ಕೇಳಿದ್ದೇನೆ. ಅದಕ್ಕೆ ಇವರು ಹೌದು ಎಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಖಾಸಗಿ ಜಮೀನನ್ನು ನೇರವಾಗಿ ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ ಎಂದು ಹೇಳಿದ್ದಾರೆ. ಇಡೀ

ರಾಜ್ಯದ ಎಷ್ಟು ಭಾಗದಲ್ಲಿ, ಎಷ್ಟು ಜಾಗವನ್ನು ಜಿಲ್ಲಾಧಿಕಾರಿಗಳು ಈ ಸಮಿತಿಗಾಗಿ ಖರೀದಿ ಮಾಡಿದ್ದಾರೆ? ನಮ್ಮ ಭಾಗದಲ್ಲಿ, ಇದುವರೆಗೂ ಮಾಡಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿಲ್ಲ, ಇದುವರೆಗೂ ಜಿಲ್ಲಾಧಿಕಾರಿಗಳು ಮಾಡಿರುವಂಥಾದ್ದು ನನ್ನ

11.10 ಎ.ಎಂ.

ಗಮನಕ್ಕೆ ಬಂದಿಲ್ಲ. ತಾವು ಆದೇಶವನ್ನು ಕೊಟ್ಟರಬಹುದು, ಯಾವಾಗ ಕೊಟ್ಟಿದ್ದೀರಿ, ಎಷ್ಟು ಖರೀದಿ ಮಾಡಿದ್ದಾರೆ, ಒಂದು ವೇಳೆ ಖರೀದಿ ಮಾಡಿದ್ದರೆ, ಯಾವಾಗ ಮಾಡಲಾಗುತ್ತದೆ?

ಶ್ರೀ ಖಮರುಲ್ ಇಸ್ಲಾಂ :— ಹಿಂದಿನ ಸರ್ಕಾರದ ಆದೇಶದ ಪ್ರಕಾರ ನೋಂದಣಿ ಮೌಲ್ಯ ಶೇಕಡ 30ರಷ್ಟು ಅಡ್ವರ್ ಇತ್ತು. ನಾನು ಎಲ್ಲಾ ಜಿಲ್ಲಾಧಿಕಾರಿಗಳೊಡನೆ ಮಾತನಾಡಿದ್ದೇನೆ, ಸರ್ಕಾರದ ಜಮೀನು ಇಲ್ಲದಿರುವುದರಿಂದ ಬಹಳ ಕಷ್ಟವಾಗಿದೆ, ಖಾಸಗಿ ಜಮೀನನ್ನು ಖರೀದಿ ಮಾಡಲು ಬೆಲೆಯನ್ನು ಹೆಚ್ಚಿಗೆ ಮಾಡಬೇಕು, Rate of the land has increased. So, the government has issued order recently. Deputy Commissioner has been given power to fix guidance value + 20%. Registration value + 30% was the order. When it has come to the notice of the government, the government has already issued the order and we have given powers. It is our responsibility. If the target is fixed, to complete it, it is the government's responsibility to provide land.

ಶ್ರೀ ಡಿ.ವಿ. ಸದಾನಂದಗೌಡ :— ನನ್ನ ಮೂರನೆ ಪ್ರಶ್ನೆಗೆ ಮಂತ್ರಿಗಳು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ, ಪ್ರಾಮಾಣಿಕವಾಗಿ ಹೇಳುವುದಾದರೆ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಯಾವುದೇ ಒಬ್ಬ ಸಾಮಾನ್ಯ ಮನುಷ್ಯ ಮನೆಯನ್ನು ಕಟ್ಟುವುದಕ್ಕೆ ಸಾಧ್ಯವಿದೆಯೆ? ಸಾಧಾರಣವಾಗಿ ಕೂಲಿ ಕಾರ್ಮಿಕರು ಇಂತಹವರು ಮನೆಯನ್ನು ಕಟ್ಟುತ್ತಾರೆ. ಇದನ್ನು ಹೆಚ್ಚಿಗೆ ಮಾಡಬೇಕೆಂದು ನಿಮ್ಮಲ್ಲಿ ಒಂದು ಸಮಿತಿಯನ್ನು ಮಾಡಿದ್ದೀರಿ, ಆ ಪ್ರಯತ್ನ ನಿಮ್ಮ ಪಕ್ಷದಲ್ಲಿ ನಡೆದಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ, ಇದು ನಿಜವೆ? ಹಾಗಿದ್ದರೆ ಇದನ್ನು ಯಾವಾಗ ಹೆಚ್ಚಿಗೆ ಮಾಡಲಾಗುವುದು, ಈ ವರ್ಷ ಅಲಾಟ್ ಮಾಡಲಾದ ಮನೆಗಳಿಗೆ ಹೆಚ್ಚಿನ ಮೊತ್ತವನ್ನು ಕೊಡುವ ಉದ್ದೇಶ ಈ ರಾಜ್ಯ ಸರ್ಕಾರಕ್ಕೆ ಇದಯೇ?

ಶ್ರೀ ಖಮರುಲ್ ಇಸ್ಲಾಂ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದನ್ನು ತಿಳಿದುಕೊಳ್ಳಬೇಕು, ಏನು ಒಂದು ಯೂನಿಟಿಗೆ 20 ಸಾವಿರ ರೂಪಾಯಿಗಳು ಎಂದು ಸರ್ಕಾರ ನಿಗದಿ ಮಾಡಿದ್ದಾರೆ ಇದರಲ್ಲಿ 10 ಸಾವಿರ ಲೋನ್, 10 ಸಾವಿರ ಸಬ್ಸಿಡಿ ಇರುತ್ತದೆ. ಮನೆ ಕಟ್ಟುವ ಕೆಲಸವನ್ನು ಈ 20 ಸಾವಿರ ರೂಪಾಯಿಗಳಲ್ಲೇ ಮಾಡಬೇಕೆಂದಿಲ್ಲ,

ಇದು ಸರ್ಕಾರ ಕೊಡುತ್ತಿರುವ ಸಹಾಯಧನ ಇದನ್ನು ತೆಗೆದುಕೊಂಡು, ಕಾಂಟ್ರಿಬ್ಯೂಷನ್ ಮಾಡುತ್ತೇವೆಂದರೆ, ಆ ಪ್ಲಾನ್ ಒಳಗೆ ಕಂಟ್ರಿಬ್ಯೂಷನ್ ಮಾಡಬೇಕು. ಈ 26 ಸಾವಿರದಲ್ಲಿ ಒಂದು ಯೂನಿಟ್ ಮಾಡಿದ್ದಾರೆ. 60 days, they have worked for themselves. It is governmental assistance. There is no bar to contribute by the Phalanubhavies for that.

ಶ್ರೀ ಎನ್. ಹೆಚ್. ಶಿವಶಂಕರರೆಡ್ಡಿ :— ನಾಮಿನೇಟೆಡ್ ಸದಸ್ಯರ ವಿಚಾರದಲ್ಲಿ ಇನ್ನು ಗೊಂದಲವಿದೆ. ಕಳೆದ ಸರ್ಕಾರದಲ್ಲಿ ನಾಮಿನೇಟೆಡ್ ಸದಸ್ಯರಿಗೆ ಮತದಾನದ ಹಕ್ಕಿದೆಯೆ ಎನ್ನುವುದರ ಬಗ್ಗೆ ಇದೇ ಸದನದಲ್ಲಿ 1998ರಲ್ಲಿ ಚರ್ಚೆಯಾಗಿತ್ತು, ಆಗ 3 ಜನ ನಾಮಿನೇಟೆಡ್ ಸದಸ್ಯರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದರು, ಆಗ ವಿರೋಧಪಕ್ಷವಾದ ಕಾಂಗ್ರೆಸ್‌ನವರು ವಿರೋಧಿಸಿ ಇದನ್ನು ವಾಪಸ್ ಪಡೆಯಬೇಕೆಂದು ಇದೇ ಸದನದಲ್ಲಿ ಚರ್ಚೆಯಾಗಿದೆ ಮತದಾನದ ಹಕ್ಕಿಲ್ಲ, ಮೆಜಾರಿಟಿ ಮೇಲೆ ತೀರ್ಮಾನವಿಲ್ಲವೆಂದು ವಾಪಸ್ ಪಡೆದಿದ್ದರು. ಆದೇ ಸುತ್ತೋಲೆ ಈಗಲೂ ಜಾರಿಯಲ್ಲಿದೆಯೆ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ನಾಮಿನೇಟೆಡ್ ಸದಸ್ಯರು ಮೆಜಾರಿಟಿ ಮೇಲೆ ಇದನ್ನು ತೀರ್ಮಾನ ಮಾಡುತ್ತೇವೆಂದರೆ ಆಳುವ ಪಕ್ಷದ ಸದಸ್ಯರಿಗೆ ತೊಂದರೆಯಾಗುವುದಿಲ್ಲ, ಆದರೆ ವಿರೋಧಪಕ್ಷದ ಹಾಗೂ ಸ್ವತಂತ್ರ ಸದಸ್ಯರಿಗೆ, ಅವರು ಒಂದು ಕಡೆ ಮತಲಿಯಾಗ ವಿರುವೇರಾಗುತ್ತದೆ ಸ್ವಲ್ಪ ತೊಂದರೆಯಾಗುತ್ತದೆ, ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಮಂತ್ರಿಗಳಲ್ಲಿ ಕೇಳುತ್ತೇನೆ.

SRI QUMURUL ISLAM :— It is practice from the last 15 years. In the democracy, we have to give responsibility to the committee. They are all members and the Chairman. Sir, Chairman of the Committee is the M.L.A. Naturally, the nominated persons are the members. So, they have to select genuineness and do it. I the democracy, it will b e very difficult to give power only to the Chairman.

ಅಧ್ಯಕ್ಷರು :— ನಾನು ಹೇಳುತ್ತೇನೆ, ಒಬ್ಬರು ಅಧ್ಯಕ್ಷರಿರುತ್ತಾರೆ, ನಾಲ್ಕು ಜನ ಸದಸ್ಯರು ವಿರೋಧವಿರುತ್ತಾರೆ, ಅಂತಹ ಸಂಧರ್ಭದಲ್ಲಿ ನೀವು ನೀವೆ ಹೊಂದಾಣಿಕೆ ಮಾಡಿಕೊಂಡು ಹೋಗಬೇಕಪ್ಪ....

(ಗೊಂದಲ)

ಸಿ. ಚೆನ್ನಿಗಪ್ಪ :—ಅವರು ಮೊದಲೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ, ಅಲ್ಲಿ ಏನು ಮಾಡುವುದಕ್ಕಾಗುವುದಿಲ್ಲ, ಅಲ್ಲಿ ಸಮಿತಿ ಯಾವುದೂ ಇಲ್ಲ, ಅಧ್ಯಕ್ಷರಿಗಿರುವ ಅಧಿಕಾರವನ್ನು ಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಸದಸ್ಯರಾದ ಚೆನ್ನಿಗಪ್ಪನವರೆ, ಕಳೆದ ಸಾರಿ ಏತಕ್ಕೆ ಸರ್ಕಾರಕ್ಕೆ ಈ ಸಲಹೆಯನ್ನು ಕೊಡಲಿಲ್ಲ ತಾವು?

ಶ್ರೀ ಸಿ. ಚೆನ್ನಿಗಪ್ಪ :— ಕಳೆದ ಸಾರಿ ಸ್ವಲ್ಪ ಲೀಗಲ್ ಆಗಿ ಮಾಡುತ್ತಿದ್ದರು ಈಗ ಎಲ್ಲಾ, ಇಲೀಗಲ್ ಆಗಿ ಮಾಡಲು ಹೊರಟಿದ್ದಾರೆ.

ಶ್ರೀ ಡಿ.ಹೆ. ಶಿವಕುಮಾರ್ :— ಈಗ ರಾಜಕಾರಣದಲ್ಲಿ ಕನ್ವೀಯನ್ಸ್ ಬೇಕೊ ಅಥವಾ ಪ್ರಿನ್ಸಿಪಲ್ ಬೇಕೊ? ಮಾನ್ಯ ಸದಸ್ಯರು ಹಿಂದಿನ ಸರ್ಕಾರವಿದ್ದಾಗಲೂ ಇಲ್ಲಿ ಇದ್ದೀರಿ, ಅವರು ಮಾಡಿದಾಗ ಇದನ್ನೆ ಹೇಳಿದಿದ್ದರೆ ಪರವಾಗಿಲ್ಲ, ನಾವೆಲ್ಲ ಸದಸ್ಯರಾಗಿದ್ದಾಗ ಅವರ ಸರ್ಕಾರವಿದ್ದಾಗ ತಮಗೆ ಬೇಕಾದವರನ್ನೆಲ್ಲಾ ಸದಸ್ಯರನ್ನಾಗಿ ಮಾಡಿಕೊಂಡರು, ಮತ್ತೆ ಇಲ್ಲಿ ಕುಳಿತಾಗ ಒಂದು ಅಲ್ಲಿ ಕುಳಿತಾಗ ಮತ್ತೊಂದು ಮಾತನಾಡಿದರೆ ಹೇಗೆ?

Sri Suresh Kumar :— When the convenience itself becomes principle?

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿಗಳನ್ನು ರಚಿಸಲಾಗಿದೆ, ಇವತ್ತು ಪ್ರತಿಪಕ್ಷದ ಶಾಸಕರು ಎಲ್ಲಿದ್ದಾರೆ ಆ ಕಡೆ ದೊಡ್ಡ ಸಮಸ್ಯೆಯಾಗಿದೆ. ನಾನು ಬಹಳಷ್ಟು ಕೇಳಿರುವಂತೆ ಆ ಸದಸ್ಯರಿಗೂ ಹಾಗೂ ಶಾಸಕರಿಗೂ ಪ್ರತಿಯೊಂದು ಸಭೆಯಲ್ಲೂ, ಅಸಹಕಾರದಿಂದಾಗಿ ಯಾವುದೇ ನಿರ್ಣಯಗಳಾಗುತ್ತಿಲ್ಲ. ನಿಜವಾಗಿ ಗ್ರಾಮಸಭೆಯಿಂದ ಏನು ಫಲಾನುಭವಿಗಳ ಪಟ್ಟಿ ಇರುತ್ತದೆ, ಅದಲ್ಲದೆ ಇನ್ನೆರಡು ಪಟ್ಟಿಗಳಾಗುತ್ತಿವೆ. ಗ್ರಾಮಸಭೆಯದೊಂದು, ಗ್ರಾಮಪಂಚಾಯತಿ ಸದಸ್ಯರೆಲ್ಲಾ ಸೇರಿಕೊಂಡು ಇನ್ನೊಂದು, ಶಾಸಕರು ಹೇಳಿದ್ದು ಮತ್ತೊಂದು ಹೀಗೆ ಮೂರು ಪಟ್ಟಿಗಳು ಇವತ್ತು ಆಶ್ರಯ ಸಮಿತಿಗೆ ಬರುತ್ತಿವೆ ಎಂದು ನನಗೆ ತಿಳಿದು ಬಂದಿದೆ. ಅದರಲ್ಲಿ ಯಾವುದನ್ನು ಆಯ್ಕೆ ಮಾಡಬೇಕೆನ್ನುವುದರಲ್ಲಿ, ಗೊಂದಲವುಂಟಾಗಿದೆ. ಗ್ರಾಮಸಭೆ ಎನ್ನುವುದು ಕೇವಲ ನೆಪಮಾತ್ರಕ್ಕೆ ಇದೆ, ಮತ್ತೆ ಹಂಚಿಕೆ ಕೂಡ ಸರಿಯಾಗಿ ಆಗುತ್ತಿಲ್ಲ.

ಅಧ್ಯಕ್ಷರು :— ಮಂತ್ರಿಗಳು ಹಾಗೂ ಸಂಬಂಧಿಸಿದ ಶಾಸಕರು ನೀವೆಲ್ಲಾ ಒಂದೆಡೆ ಕುಳಿತುಕೊಂಡು ಚರ್ಚೆ ಮಾಡಿ ಯಾವುದಾದರೂ ಒಂದು ವಯಾ ಮೀಡಿಯಾ ಕಂಡುಹಿಡಿಯಿರಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಅಧ್ಯಕ್ಷರೆ, ನಿನ್ನೆಯೆಲ್ಲಾ ಕುಳಿತುಕೊಂಡು ಮಾತನಾಡಿದೆವು, ವಯಾ ಮೀಡಿಯಾ ಹುಡುಕುವುದಕ್ಕಾಗುತ್ತಿಲ್ಲ. ಮಾನ್ಯ ಸದಸ್ಯರಾದ ಸದಾನಂದಗೌಡರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದರು, 20 ಸಾವಿರ ರೂಪಾಯಿಗಳನ್ನು ಒಂದು ಆಶ್ರಯ ಮನೆಯನ್ನು ಕಟ್ಟಲು ಸರ್ಕಾರ ಕೊಡುತ್ತಿದೆ, ಇದರಲ್ಲಿ ಒಂದು ಬಸ್ ಶೆಲ್ಟರ್ ಆಗುವುದಿಲ್ಲ, ಇವತ್ತು ಶ್ರೀಮಂತರ ಮನೆಯ ಶೌಚಾಲಯ ಖರ್ಚು ಇದಕ್ಕಿಂತ ಜಾಸ್ತಿಯಾಗುತ್ತದೆ.

ಶ್ರೀ ಡಿ.ಹೆ. ಶಿವಕುಮಾರ್ :— ಮಾನ್ಯ ಮಂತ್ರಿಗಳು ಹೇಳಿದ್ದು ನಾವು ಅರ್ಥ ಮಾಡಿಕೊಳ್ಳಲಿಲ್ಲ, 20 ಸಾವಿರ ರೂಪಾಯಿಗಳಲ್ಲಿ 10 ಸಾವಿರ ಸಾಲ, 10 ಸಾವಿರ

ಸಭ್ಯಡಿ, ಅದಕ್ಕಿಂತ ಹೆಚ್ಚಿಗೆ ಹಣವನ್ನು ಹಾಕಿ ಎಷ್ಟು ಬೇಕಾದರೂ ಕಟ್ಟಿಕೊಂಡು ಹೋಗಬಹುದು, ಹೆಚ್ಚಿಗೆ ಹಾಕಿಕೊಂಡು ಮಾಡಿಕೊಳ್ಳಿ ಯಾರು ಬೇಡವೆಂದು ಹೇಳಿದರು.

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ :— 10 ಸಾವಿರ ರೂಪಾಯಿಗಳ ಸಾಲವೆಂದು ಯಾವ ಫಲಾನುಭವಿಯು ತಿಳಿದುಕೊಂಡಿಲ್ಲ, ಯಾರ ಹತ್ತಿರನೂ ಪಸೂಲಾತಿಯನ್ನೇ ಮಾಡಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :— ತಾವು ಅಧ್ಯಕ್ಷರುಗಳು ಅವರಿಗೆ ತಿಳಿಸಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಬಡವರ ಸರ್ಕಾರ, ಅವರ ಬಗ್ಗೆ ಕಾಳಜಿವುಳ್ಳವರೆಂದು ಅಧಿಕಾರಕ್ಕೆ ಬಂದವರು 20 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಲಾಗುತ್ತದೆಯೆ ಇಲ್ಲವೆಂಬುದು ಅವರಿಗೆ ಗೊತ್ತಿಲ್ಲವೆ, ಹಾಗಾಗಿ ಸರ್ಕಾರ ಆಶ್ರಯ ಮನೆಗಳಿಗೆ ಕೊಡುವ ಹಣವನ್ನು ಹೆಚ್ಚು ಮಾಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ :— ಇಂದಿರಾ ಆವಾಸ್ ಯೋಜನೆಗೆ ಕೊಡುತ್ತಿರುವ ಹಣವನ್ನು ದೆಹಲಿಯಿಂದ ಸ್ವಲ್ಪ ಏರಿಸಲಿ ಇಲ್ಲಿಯೂ ಏರಿಸಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ :— ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಪ್ರಶ್ನೆ ಬಂದಾಗ ಸಹಕಾರ ಸಚಿವರು ಉತ್ತರವನ್ನು ಕೊಡಲಿ ಇದು ಮಸತಿ ಮಂತ್ರಿಗಳಿಗೆ ಸಂಬಂಧಿಸಿದ್ದು, ಅವರು ಉತ್ತರ ಕೊಡುತ್ತಾರೆ, ಇವರೇಕೆ ಉತ್ತರಿಸಬೇಕು?

ಶ್ರೀ ಖಮರುಲ್ ಇಸ್ಲಾಂ :— ಆಶ್ರಯ ಯೋಜನೆಯ ಮನೆಗಳಿಗೆ ಕೊಡುತ್ತಿರುವ ಹಣವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಸಿ. ಬೈರೇಗೌಡ ಮಾನ್ಯ :— ಅಧ್ಯಕ್ಷರೇ, ನಿವೇಶನಗಳಿಗೆ ಸರ್ಕಾರೀ ಭೂಮಿ ಇಲ್ಲದೇ ಇರುವಂಥ ಕಡೆ ಖಾಸಗಿ ಭೂಮಿಯನ್ನು ಕೊಂಡುಕೊಳ್ಳತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ತಿಳುವಳಿಕೆ ಪ್ರಕಾರ, ಅದಕ್ಕೆ ಒಂದು ಎಕರೆಗೆ 60-70 ಸಾವಿರ ಮಾತ್ರ ಕೊಡಲು ಸಾಧ್ಯವಿದೆ. ಅದು ಸಾಕಾಗುತ್ತಿಲ್ಲ. ಕೆಲವು ಹೋಬಳಿ ಕೇಂದ್ರಗಳಲ್ಲಿ ಮತ್ತು ಕೆಲವು ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಜನಸಂಖ್ಯೆ ಹೆಚ್ಚಿಗೆ ಇರುತ್ತದೆ. ಜನಸಂಖ್ಯೆ ಹೆಚ್ಚಿರುವ ಕಡೆ ಭೂಮಿಯ ಬೆಲೆಯೂ ಜಾಸ್ತಿ. ಅಂಥ ಕಡೆ ಒಂದು ಎಕರೆಗೆ 2-3 ಲಕ್ಷ ರೂಪಾಯಿ ಹಣ ಕೊಟ್ಟರೂ ಸಾಕಾಗುವುದಿಲ್ಲ. ಗೈಡ್‌ಲೈನ್ಸ್ +30 ಪರ್ಸೆಂಟ್ ಎಂದು ಹೇಳುತ್ತೀರಿ. ರಿಜಿಸ್ಟ್ರೇಷನ್ ಯಾವ ರೀತಿ ಆಗುತ್ತಿದೆ ಎನ್ನುವುದು ನಮಗೆ ಗೊತ್ತಿದೆ. ಆದ್ದರಿಂದ ಈಗ ನಿಗದಿಪಡಿಸಿರುವ ಹಣ ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡದಿದ್ದರೆ ನಿವೇಶನ ಕೊಡಲು ಸಾಧ್ಯವೇ ಇಲ್ಲ. ಆದ್ದರಿಂದ, ಈ ಹಣವನ್ನು ಹೆಚ್ಚು ಮಾಡತಕ್ಕಂಥಾದ್ದಕ್ಕೆ ಸರ್ಕಾರ ಆಲೋಚನೆ ಮಾಡಿ ಆದಷ್ಟು ಶೀಘ್ರವಾಗಿ ಇದನ್ನು ಹೆಚ್ಚು ಮಾಡಲು ಮನಸ್ಸು ಮಾಡುತ್ತದೆಯೇ ಎನ್ನುವುದನ್ನು ಹೇಳಬೇಕು.

SRI QUMURUL ISLAM :— Sir, what Mr. Byregowda has said is correct. The government lands are not available in the villages and the cities, and private land has to be purchased if you have to complete the target. I have taken the meeting of all consultation with, we have already brought to the notice of the government, becuase Deputy Commissioners are responsible to fix the guidance value. Guidance value is nothing but nearer to the market value. They are responsible to fix the registration value. As per the earlier Order, res\gistration value plus 30% was the existing government order. This order is changed now. Now, the government has issued the order to purchase the private land at guidance value plus 20% and there is no difficulty as per the report of the Deputy Commissioners of various districts.

(ಈ ಹಂತದಲ್ಲಿ ಸದಸ್ಯರಾದ ಎಂ. ಚಂದ್ರಪ್ಪನವರು ಪ್ರಶ್ನೆ ಕೇಳಲು ಎದ್ದು ನಿಂತರು)

ಅಧ್ಯಕ್ಷರು :— ಸೋಮವಾರ ಅಥವಾ ಮಂಗಳವಾರ ಇದನ್ನು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಹಾಕುತ್ತೇನೆ. ಆಗ ನೀವು ಮಾತನಾಡಿ. ಇನ್ನೂ 9 ಪ್ರಶ್ನೆಗಳು ಉಳಿದಿವೆ. ಎಲ್ಲರೂ ಕೇಳುವುದಕ್ಕಾಗುವುದಿಲ್ಲ. ಈಗ ಸದಾನಂದಗೌಡರು ಕೊನೆಯ ಉಪ ಪ್ರಶ್ನೆಯನ್ನು ಕೇಳುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಈ ಯೋಜನೆಯಲ್ಲಿ ಕಟ್ಟಿದಂಥ ಮನೆಗಳನ್ನು ಇಂಜಿನಿಯರಿಂಗ್ ಡಿವಿಷನ್‌ನವರು ವ್ಯಾಲುಯೇಷನ್ ಮಾಡುವಾಗ 20 ಸಾವಿರಕ್ಕಿಂತ ಹೆಚ್ಚಾದರೆ ಬಿ.ಡಿ.ಓ. ಕಛೇರಿಗಳಲ್ಲಿ ಹಣ ಪಾವತಿ ಮಾಡದೇ ಇರುವಂಥಾದ್ದು ತಮ್ಮ ಗಮನಕ್ಕೆ ಬಂದಿದೆಯೇ? 20 ಸಾವಿರದಲ್ಲೇ ಮನೆ ಕಟ್ಟಬೇಕು. ಅವನು 10 ಸಾವಿರವನ್ನು ಸೇರಿಸಿ ಕಟ್ಟಿದರೆ, ಬಿ.ಡಿ.ಓ. ಕಛೇರಿಗಳಲ್ಲಿ ಇ.ಓ.ಗಳು ದುಡ್ಡನ್ನು ಕೊಡುತ್ತಿಲ್ಲ. ಈಗ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳಿಗೆ ದುಡ್ಡನ್ನು ಕೊಡಲು ಹೇಳಿದ್ದೀರಿ. ಖಂಡಿತವಾಗಿ ಅವರು ಕೊಡುವುದಿಲ್ಲ. ಆ ಬಗ್ಗೆ ತಾವು ಸರ್ಕಾರದಿಂದ ಒಂದು ಸುತ್ತೋಲೆ ಕಳುಹಿಸುತ್ತೀರಾ?

SRI QUMURUL ISLAM :— I have not received any such things. Please bring to my notice, I will take suitable action.

ವಾಯುದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ.

482(4575) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಗೇಡಂ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.